# ಆಹಾ ಸುದ್ದಿ!

★ ಸಸಿತೋಟ

ಅಮೆರಿಕಾದ ವಿನ್ಯಾಸಕ ಜಸ್ಟಿನ್ ಕ್ರೋವ್ ಕೈಗೆ ಮೃತಪಟ್ಟವರ ಬೂದಿ ಕೊಡಿ. ಅದನ್ನು ಬಳಸಿ ಕಾಫಿ ಕಪ್, ಬೋಗುಣಿ ಮೊದಲಾದವುಗಳನ್ನು ತಯಾರಿಸಿ ಕೊಡುತ್ತಾರಂತೆ. ನಿಧನ ಹೊಂದಿದ ಪ್ರೀತಿಪಾತ್ರರ ದೇಹದ ವಾಸನೆ, ರುಚಿ ನೋಡಲು ಇನ್ನೇನು ಬೇಕು ಹೇಳಿ!



ಜರ್ಮನಿಯ 82ರ ವಯೋವೃದ್ಧ ಮೂರು ವರ್ಷದ ಹಿಂದೆ ಕಳೆದುಕೊಂಡಿದ್ದ ಮದುವೆ ಉಂಗುರವನ್ನು ಆತನ ತೋಟದಲ್ಲಿ ಬೆಳೆದ ಕ್ಯಾರಟ್ ಹೇಗೆ ಹಿಡಿದಿಟ್ಟುಕೊಂಡಿದೆ ನೋಡಿ. ಉಂಗುರ ಸಿಕ್ಕೇ ಸಿಗುತ್ತದೆ ಎಂದು 6 ತಿಂಗಳ ಹಿಂದೆ ತೀರಿಕೊಂಡ ಆತನ ಹೆಂಡತಿ ಹೇಳಿದ್ದಳಂತೆ. ಬಿತ್ತಿದಂತೆ ಬೆಳೆ ಎಂಬುದು ಇದಕ್ಕೇ ಇರಬಹುದು.

ಫ್ರಾನ್ಸ್‌ನಲ್ಲಿ ತಯಾರಿಸುವ ವಿಶೇಷವಾದ ವೈನ್ ದಿನಾಚರಣೆ ಸಂಪ್ರದಾಯ ಟೋಕಿಯೋದಲ್ಲಿ ಇದೆಯಂತೆ. ಪೂರ್ತಿ ವೈನ್ ಕೊಳದಲ್ಲಿ ಮುಳುಗೇಳುವ ಭಾಗ್ಯ ಇಲ್ಲದಿದ್ದರೂ ಬಣ್ಣದ ನೀರಿಗೆ ಒಂದೆರಡು ಬಾಟಲ್ ವೈನ್ ಸುರಿದು ಪುಳಕಿತರಾಗುವ ಖಯಾಲಿ ಅಲ್ಲಿಯ ಮಂದಿಗೆ.



ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಅನ್ ಹೆಸರು ಚೀನಿಯರ ಬಾಯಲ್ಲಿ 'ಫ್ಯಾಟಿ ಕಿಮ್ ದಿ ಥರ್ಡ್' ಆಗಿದೆಯಂತೆ. ಇದು ಗೊತ್ತಾಗಿದ್ದು, ಚೀನಾ ಸರ್ಕಾರ ಈ ಶಬ್ದದ ಹುಡುಕಾಟವನ್ನು ಅಂತರ್ಜಾಲದಲ್ಲಿ ಬ್ಲಾಕ್ ಮಾಡಿದ ನಂತರ. 'ಮುಖಂಡರಿಗೆ ಗೌರವ ಕೊಡುವುದನ್ನು ಕಲಿಯಿರಿ' ಎಂದ ಸರ್ಕಾರಕ್ಕೆ ಗೌರವ ಕೊಡಲು ಚೀನಿಯರು ಇನ್ನೊಂದಿಷ್ಟು ಕೋಡ್ ವರ್ಡ್‌ಗಳನ್ನು ಹುಡುಕಾಡುತ್ತಿದ್ದಾರಂತೆ. ಸೃಜನಶೀಲತೆಗೆ ತಡೆ ಒಡ್ಡಲು ಸಾಧ್ಯವೇ?



ಒಂಟಾರಿಯೋದ ಈ ರೈತ ಹೊಲಕ್ಕೆ ಗೊಬ್ಬರ ಉಣಿಸುವ ರೀತಿಯನ್ನು ಪ್ರದರ್ಶಿಸಿದ್ದಾನೆ. ಮಲದಿಂದ ಗೊಬ್ಬರ ತಯಾರಿಸುವ ಈ ಟ್ಯಾಂಕ್ ಅನ್ನು ಟ್ರ್ಯಾಕ್ಟರ್ ಒಂದು ಹೊಲದಲ್ಲಿ ಎಳೆದುಕೊಂಡು ಹೋಗುತ್ತಿದ್ದರೆ ಈತ ಟ್ಯಾಂಕ್ ತುಂಬುವ ಕೆಲಸ ಮಾಡುತ್ತಿದ್ದಾನೆ. ಆತ ಓದುತ್ತಿರುವುದು 'ನೇರವಾಗಿ ಹೊಟ್ಟೆಯಿಂದ ಹೊಲಕ್ಕೆ' ಎಂಬ ಪುಸ್ತಕವೇ ಇರಬಹುದು.



ಇಂಗ್ಲೆಂಡ್‌ನ ಸೈಮನ್ ಬುಂಗಿ ಜಂಪ್ ಹೊಡೆದು ಚಹದಲ್ಲಿ ಬಿಸ್ಕತ್ ಅದ್ದಿ ತಿನ್ನುವ ದಾಖಲೆ ಮಾಡಿದ್ದಾನಂತೆ. 240 ಅಡಿ ಎತ್ತರದಿಂದ ಡೈವ್ ಹೊಡೆದ ಈತ ಅಪಾಯವನ್ನೂ ಲೆಕ್ಕಿಸದೇ ಇದ್ದಿದ್ದು ಒಂದು ಕಪ್ ಚಹ ಹಾಗೂ ಬಿಸ್ಕತ್‌ಗಾಗಿ.